<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ವಾದಿ ಪರ : ಶ್ರೀ ಪಿ.ಎಂ.ಆರ್., ವಕೀಲರಿಂದಃ</u>

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಾತನ ಹೆಸರು ಹುಣಸೇಮರದ ಮಲ್ಲಯ್ಯ. ನನ್ನ ಅಜ್ಜಿಯ ಹೆಸರು ಪಾಪಮ್ಮ ಅಂತ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಹೆಸರು ಬೋರಯ್ಯ ಯಾನೆ ಕೊಡಗಳ್ಳಿ ಬೋರಯ್ಯ ಅಂತ ಇರುತ್ತದೆ. ನನ್ನ ತಾಯಿಯ ಹೆಸರು ಚಿತ್ತಮ್ಮ ಅಂತ ಇರುತ್ತದೆ. ನನ್ನ ತಂದೆ ತಾಯಿಗೆ ನಾನು ಒಬ್ಬನೇ ಮಗನಿರುತ್ತೇನೆ. ನನಗೆ ಸಹೋದರ ಸಹೋದರಿಯರು ಯಾರು ಇರುವುದಿಲ್ಲ . ನನ್ನ ತಂದೆಯ ಸಹೋದರಿಯರು 3 ಜನ ಇದ್ದು ಅವರುಗಳೆಂದರೆ 1) ಪಾಲಮ್ಮ, 2)ಓಬಮ್ಮ, 3) ಪಾಲಮ್ಮ ಅಂತ ಇರುತ್ತದೆ . 3 ನೇ ಪಾಲಮ್ಮ ಇವಳನ್ನು ದುರ್ಗದ ಪಾಲಮ್ಮ ಅಂತ ಕರೆಯುತ್ತಿದ್ದರು ಎಂದರೆ ಸರಿ. ನನ್ನ ಅತ್ತೆ ದುರ್ಗದ ಪಾಲಮ್ಮ ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ಪಾಲಮ್ಮ ಮತ್ತು ಓಬಮ್ಮ ಇಬ್ಬರೂ ಮೃತಪಟ್ಟಿರುತ್ತಾರೆ ಎಂದರೆ ಸರಿ.

ನ್ಯಾಯಾಲಯದ ಮುಂದೆ ಇರುವ ಮಂಜುನಾಥ ಯಾನೆ ಮಂಜಪ್ಪ ಈ ಕೇಸಿನ ವಾದಿ ನನ್ನ ಮಗನಿರುತ್ತಾನೆ ಎಂದರೆ ಸರಿಯಲ್ಲ. ವಾದಿಯರು ನನ್ನ ಮೇಲೆ ಈ ಕೇಸು ಹಾಕಿದ ನಂತರ ಸದರಿಯವರು ಯಾರ ಕುಟುಂಬಕ್ಕೆ ಸೇರಿದವರು ಮತ್ತು ಅವರ ತಂದೆ ತಾಯಿ , ತಾತ , ಅಜ್ಜಿ ಯಾರು ಅಂತ ಕೇಳಿ ತಿಳಿದುಕೊಂಡಿರುವುದಿಲ್ಲ. ಅದೇ ರೀತಿ ವಾದಿಯರು ನನ್ನ ಮೇಲೆ ಅನಾವಶ್ಯಕವಾಗಿ ಈ ಕೇಸನ್ನು ದಾಖಲು ಮಾಡಿದ್ದು ಈ ಕುರಿತು ನಾನು ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಈ ಕೇಸಿನ ವಾದಿಯರು ನಾಯಕನಹಟ್ಟಿ ಹೋಬಳಿ ಜಾಗ್ನಾರಹಟ್ಟಿ ಗ್ರಾಮದವರು ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ. ವಾದಿಯರು ಹಾಜರುಪಡಿಸಿದ ದಾಖಲೆಗಳನ್ನು ನಾನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿರುವುದಿಲ್ಲ.

ಅದೇ ರೀತಿ 1984-85 ನೇ ಸಾಲಿನ ದಾವಾ ಸ್ವತ್ತು ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ಅತನ ತಾಯಿ ತಿಪ್ಪಮ್ಮ ಅಂತ ಪಹಣಿ ಪತ್ರಿಕೆಯಲ್ಲಿ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

1984-85 ನೇ ಸಾಲಿನಿಂದ ದಾವಾ ಷೆಡ್ಯೂಲ್ ಸ್ವತ್ತು ಯಾವ ಹೆಸರಿಗೆ ಬರುತ್ತದೆ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿಯು ಉತ್ತರ ಕೊಡದೇ ಸಮ್ಮನಿರುತ್ತಾರೆ. ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ತಾಯಿ ತಿಪ್ಪಮ್ಮ ಇವರ ಹೆಸರಿಗೆ ಆತನ ಅಜ್ಜಿ ಪಾಪಮ್ಮ ದಾನ ಪತ್ರ ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. 1988-89 ನೇ ಸಾಲಿನ ಪಹಣಿ ಪಾಪಮ್ಮನ ಹೆಸರಿಗೆ ಇದ್ದ ಆಸ್ತಿಯು ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ತಾಯಿ ತಿಪ್ಪಮ್ಮ ಇವರ ಹೆಸರಿಗೆ ನಿಪಿಃ 12 ರಂತೆ ಪಹಣಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ .

ಅದೇ ರೀತೀ ನಿಪಿಃ 13, 14 ರಂತೆ ದಾವಾ ಆಸ್ತಿ ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ತಾಯಿ ತಿಪ್ಪಮ್ಮ ಇವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ತಿಪ್ಪಮ್ಮ ಯಾರು ಅಂತ ನನಗೆ ಗೊತ್ತಿಲ್ಲ. ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ತಾಯಿ ತಿಪ್ಪಮ್ಮ ಇವರ ಹೆಸರಿಗಿದ್ದ ಜಮೀನಿನ ಖಾತೆಯನ್ನು ಯಾರು ಮಾಡಿಸಿರುತ್ತಾರೆ ಅಂತ ಗೊತ್ತಿಲ್ಲ.

ನನ್ನ ಅಜ್ಜಿ ಪಾಪಮ್ಮ ಯಾವಾಗ ಮರಣ ಹೊಂದಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನನ್ನ ಅಜ್ಜಿ ಪಾಪಮ್ಮ ಇವರ ಹೆಸರಿಗೆ ಇದೆ ಅಂತ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ ಆದರೆ ಯಾವ ದಾಖಲೆ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿಯು ಉತ್ತರ ಕೊಡದೇ ಸುಮ್ಮನೇ ನಿಂತಿರುತ್ತಾರೆ. ನಮ್ಮ ಅಜ್ಜಿ ಪಾಪಮ್ಮ, ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ತಾಯಿ ತಿಪ್ಪಮ್ಮ ಇವರು ತೀರಿಕೊಂಡ ನಂತರ ನಾನು ಮರಣ ದಾಖಲೆಗಳನ್ನು ಕಂದಾಯ ಇಲಾಖೆಗೆ ಕೊಟ್ಟು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಅಂತ ಸಾಕ್ಷಿ ನುಡಿಯುತ್ತಾರೆ. ನಾನು ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದು ಸದರಿ ಮರಣ ಪ್ರಮಾಣ ಪತ್ರದಲ್ಲಿ ಮೃತ ವ್ಯಕ್ತಿಯ ತಂದೆ ತಾಯಿ ಹೆಸರು ಮತ್ತು ಅವರ ಸಂಬಂಧ ಸದರಿ ದಾಖಲೆಯಲ್ಲಿ ನಮೂದಗಿರುತ್ತದೆ ಎಂದರೆ ಸರಿ. ಮಲ್ಲಿಕಾರ್ಜುನ ಇವರು ಯಾವ ವರ್ಷದಲ್ಲಿ ತೀರಿಕೊಂಡರು ಮತ್ತು ಅವರ ತಂದೆ ತಾಯಿ ಯಾರು ಅಂತ ನಾನು ತಿಳಿದುಕೊಂಡಿರುವುದಿಲ್ಲ. ಮಲ್ಲಿಕಾರ್ಜುನ ಈತನ ಮರಣ ದಾಖಲೆಯನ್ನು ನಾನು ಚಳ್ಳಕೆರೆ ಪ್ರಧಾನ ಸಿವಿಲ್ ನ್ಯಾಯಾಲಯ ಜೆ.ಎಂ.ಎಫ್.ಸಿ. ನಲ್ಲಿ ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಮೃತ ಮಲ್ಲಿಕಾರ್ಜುನ ಈತನ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯದಿಂದ ಪಡೆದಿದ್ದು ಅದನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

2017-18 ನೇ ಸಾಲಿನಲ್ಲಿ ವಾದಿಯರ ಗಮನಕ್ಕೆ ತರದೇ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಪೌತಿ ಬದಲಾವಣೆ ಮೂಲಕ ನನ್ನ ಹೆಸರಿಗೆ ಖಾತೆಯಾದ ಬಗ್ಗೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಏನಾದರೂ ತೊಂದರೆ ಇದೆಯಾ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿಯು ಉತ್ತರ ಕೊಡದೇ ಸುಮ್ಮನೇ ಇರುತ್ತಾರೆ.

ನನ್ನ ಸ್ವಂತ ಊರು ಜಾಗನಾರಹಟ್ಟಿ ಎಂದರೆ ಸರಿ. ವಾದಿಯರು ನ್ಯಾಯಾಲಯದಿಂದ ತಾತ್ಕಾಲಿಕ ನಿರ್ಭಂದಕಾಜ್ಞೆ ಪಡೆದ ನಂತರ ನೋಟೀಸ್?ಕಳುಹಿಸಿರುತ್ತಾರೆ ಎಂದರೆ ಸರಿ. ದಿಃ 09.07.2016 ರಂದು ನಮ್ಮ ಕುಟುಂಬದ ವಂಶವೃಕ್ಷ ಪಡೆಯಲು ನಾನು ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿ ಕುಟುಂಬದ ವಂಶವೃಕ್ಷ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ವಂಶವೃಕ್ಷ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ವಂಶವೃಕ್ಷ ಮಾಡಿಸಲು ರೂ. 20/- ಗಳ ನನ್ನ ಹೆಸರಿಗೆ ಎರಡು ಬಾಂಡ್?ಪೇಪರ್ ಸಹ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಪಡೆದಿರಬಹುದು ಅವುಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ . ಸದರಿ ಬಾಂಡ್?ಪೇಪರ್ ಮೇಲೆ ನಮ್ಮ ಒಟ್ಟು ಕುಟುಂಬದವರ ಪೌತಿ ವಾರಸುದಾರರು ಯಾರು ಅಂತ ನಮೂದು ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಾನು ತಾಲ್ಲೂಕು ಕಚೇರಿಯಲ್ಲಿ ಯಾರು ಕಾಗದ ಪತ್ರ ದಾಖಲೆ ಮಾಡಿಸಿಕೊಡುವವರು ಇರುತ್ತಾರೋ ಅವರ ಕಡೆ ಹಣ ಕೊಟ್ಟಿದ್ದು ಅವರೇ ಕಾಗದ ಪತ್ರ ಮಾಡಿಸಿಕೊಂಡು ಬಂದಿರುತ್ತಾರೆ.

ಉಪತಹಶೀಲ್ದಾರ್ ರವರು, ರಾಜಸ್ವ ನಿರೀಕ್ಷಕರು, ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ನಮಗೆ ಕುಟುಂಬದ ವಂಶವೃಕ್ಷ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅವರು ಕೊಟ್ಟ ದಾಖಲೆ ಹಾಜರುಪಡಿಸಿರುತ್ತೇನೆ ಅದೇ ರೀತಿ ಸದರಿ ವಂಶವೃಕ್ಷ ಪ್ರಮಾಣ ಪತ್ರ ದಲ್ಲಿ ನಾನು, ನನ್ನ ಮೊದಲನೇ ಹೆಂಡತಿ ಮಕ್ಕಳು ಹಾಗೂ 2 ನೇ ಹೆಂಡತಿ ಮಕ್ಕಳ ಹೆಸರನ್ನು ಸಹ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಅವರು ಕೊಟ್ಟ ದಾಖಲೆಯನ್ನು ನಾನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

(ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.